# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-27
ಚಾಸಾ-32

ದಿನಾಂಕಃ 15-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಚಿಕ್ಕಣ್ಣ |
| **ತಂದೆಯ / ಗಂಡನ ಹೆಸರು** | ಚಿಕ್ಕರಂಗಯ್ಯ |
| **ವಯಸ್ಸು** | 61 |
| **ಉದ್ಯೋಗ** | ನಿವೃತ್ತ ಸಹಾಯಕ ಇಂಜಿನಿಯರ್ |
| **ವಾಸಸ್ಥಳ** | ಎಂ.ಎಂ.ಎ. ಕಾವಲ್, ಗುಬ್ಬಿ ತಾಲ್ಲೂಕು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು 2019 ರಿಂದ 2025 ರವರೆಗೂ ಪಾವಗಡ ಲೊಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ. 30.09.2023 ರಂದು ಚಾಸಾ-44 ರವರು ನನಗೆ ಬೂದಿಬೆಟ್ಟ ಗ್ರಾಮಕ್ಕೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ನಕ್ಷೆ ತಯಾರಿಸಿರುತ್ತೇನೆ. ಕೃತ್ಯ ನಡೆದ ಸ್ಥಳ ಲಕ್ಷ್ಮೀದೇವಮ್ಮ ರವರ ಮನೆಯ ಮುಂದಿನ ಖಾಲಿ ಜಾಗವಾಗಿರುತ್ತದೆ. ನ್ಯಾಯಾಲಯದಲ್ಲಿರುವ ನಕ್ಷೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ನಕ್ಷೆಯನ್ನು ನಿಪಿ-26 ಎಂದು, ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ನಿಪಿ-26 ನಕ್ಷೆಯನ್ನು ಪೊಲೀಸರ ಹೇಳಿಕೆಯ ಮೇರೆಗೆ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಕಾಶೆಯಲ್ಲಿ ಕೃತ್ಯ ನಡೆದ ಸ್ಥಳದ ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ , ಸದರಿ ಜಾಗ ಯಾರಿಗೆ ಸೇರಿದ್ದು ಎಂದು ನಾನು ವಿಚಾರಿಸಿರವುದಿಲ್ಲ ಏಕೆಂದರೆ ಅಲ್ಲಿ ಯಾರು ಇರಲಿಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡಿರುವುದಿಲ್ಲ, ಕೃತ್ಯ ನಡೆದ ಸ್ಥಳದ ಅಕ್ಕ ಪಕ್ಕದಲ್ಲಿ ವಾಸದ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ-26 ನಕ್ಷೆಯನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರಿಂದ ಬಂದ ಮನವಿಯನ್ನು ಮೇಲಾಧಿಕಾರಿಗಳು ನನಗೆ ಕಳುಹಿಸಿಕೊಟ್ಟು ನಕ್ಷೆ ತಯಾರು ಮಾಡಿಕೊಡುವಂತೆ ಹೇಳಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮನವಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮನವಿ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಮನವಿ ಪತ್ರದಲ್ಲಿ ದಿ. 31.07.2023 ಎಂದು ಬರೆದಿರುತ್ತದೆ ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**